**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ರವರ ನ್ಯಾಯಾಲಯ, ತಿಪಟೂರು**

**O.S. No. 52/2015**

**DW-1**

**ದಿನಾಂಕಃ 02-07-2026 ರಂದು ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಪಾಟೀ ಸವಾಲು ವಾದಿಯ ಪರ ಶ್ರೀ ಟಿಕೆಯು ವಕೀಲರಿಂದಃ**

ವಾದಿಯ ತಂದೆ ಹೆಸರು ಲಕ್ಷ್ಮಯ್ಯ ಎನ್ನುವುದು ಸರಿ. ಸದರಿ ಲಕ್ಷ್ಮಯ್ಯನವರಿಗೆ ಕೃಷ್ಣಯ್ಯ, ಲಕ್ಷ್ಮೀನಾರಾಯಣ ಮತ್ತು ರಾಮಚಂದ್ರಪ್ಪ ಎನ್ನುವ 3 ಜನ ಸಹೋದರರು ಎನ್ನುವುದು ಸರಿ. ಲಕ್ಷ್ಮಯ್ಯ ಮತ್ತು ಕೃಷ್ಣಯ್ಯ ಈ ಬದುಕಿಲ್ಲ ಎನ್ನುವುದು ಸರಿ. ಸದರಿ ಕೃಷ್ಣಯ್ಯನವರ ಪತ್ನಿಯೇ 2ನೇ ಪ್ರತಿವಾದಿ ಪಾರ್ವತಮ್ಮ ಎನ್ನುವುದು ಸರಿ. ಅವರ ಮಗ ಈಗ ನ್ಯಾಯಾಲಯದಲ್ಲಿ ಇರುವ ಆನಂದ ಎನ್ನುವುದು ಸರಿ. ನಾನು ಸದರಿ 2ನೇ ಪ್ರತಿವಾದಿಯ ಅಕ್ಕನ ಮಗ. ನನ್ನ ತಂದೆಯ ಹೆಸರು ತಿಮ್ಮಶೆಟ್ಟಿ ಎನ್ನುವುದು ಸರಿ. ವಾದಿಯ ತಾತನ ಹೆಸರು ಶೆಟ್ಟಯ್ಯ ಎನ್ನುವುದು ಸರಿ. ಈಗ ನಾನು ನೋಡುತ್ತಿರುವ ನಿಪಿ- 13 ರಲ್ಲಿ ನಿಪಿ-13(ಸಿ) ಎಂದು ಗುರುತಿಸಲ್ಪಟ್ಟಿರುವ ಸಹಿ ಲಕ್ಷ್ಮಯ್ಯನವರ ಸಹೋದರ ಶೆಟ್ಟಯ್ಯನವರ ಮಗ ಲಕ್ಷ್ಮೀನಾರಾಯಣನವರದ್ದು ಎಂದರೆ ಸರಿ. ಸದರಿ ಲಕ್ಷ್ಮೀನಾರಾಯಣನವರು ಈ ಪ್ರಕರಣದಲ್ಲಿ ಪಿಡಬ್ಲ್ಯೂ 3 ಆಗಿ ವಿಚಾರಣೆಗೆ ಒಳಪಟ್ಟಿದ್ದಾರೆ ಎಂದರೆ ಸರಿ. ನನ್ನ ಖಾಯಂ ವಾಸ ಬೆಂಗಳೂರು ಎಂದರೆ ಸರಿ. ನಾನು ಸುಮಾರು 20 ವರ್ಷಗಳಿಂದ ಸಾಫ್ಟ್ ವೇರ್ ಇಂಜಿನಿಯರ್ ಆಗಿದ್ದೇನೆ. ವಾದಿಯು ಈ ದಾವೆಯನ್ನು ದಾವೆ ಸರ್ವೆ ನಂಬರ್ ನ 18 ಗುಂಟೆಗಾಗಿ ಹಾಕಿದ್ದಾರೆ ಎಂದರೆ ಸರಿ. ಸದರಿ 18 ಗುಂಟೆ ಪಿಡಬ್ಲ್ಯೂ 3 ಲಕ್ಷ್ಮೀನಾರಾಯಣನವರಿಗೆ ಸೇರಿದ್ದ ಸ್ವತ್ತಾಗಿತ್ತು ಎಂದರೆ ಸರಿ. ಸದರಿ ಆಸ್ತಿಯನ್ನು 1989 ರಲ್ಲಿ ಲಕ್ಷ್ಮೀನಾರಾಯಣನವರು ನೋಂದಾಯಿತ ಕ್ರಯಪತ್ರದ ಮೂಲಕ ಖರೀದಿಸಿದರು ಎಂದರೆ ಸರಿ. ಸದರಿ ಆಸ್ತಿ ಲಕ್ಷ್ಮೀನಾರಾಯಣನವರ ಸ್ವಂತ ಸ್ವತ್ತಾಗಿದ್ದು ಪಿತ್ರಾರ್ಜಿತ ಆಸ್ತಿ ಎನ್ನುವುದು

ಗೊತ್ತಿದೆ. ಈ ಹಂತದಲ್ಲಿ ಸಾಕ್ಷಿಯು ಸದರಿ ಆಸ್ತಿ ಲಕ್ಷ್ಮೀನಾರಾಯಣನವರು ಕೊಂಡು ಕೊಂಡದ್ದಪ್ಪ ಕೃಷ್ಣಯ್ಯನವರು ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿಪಿ-1 ರ ದಾಖಲೆಯನ್ನು ವಕೀಲರು ತೋರಿಸಿ ಪುನಃ ಪ್ರಶ್ನಿಸಿದಾಗ ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಹಾಗಿದ್ದಲ್ಲಿ ನಾನು ಇಲ್ಲಿಯವರೆಗೂ ಅಂದರೆ ಈ ವಿಚಾರಣೆಗೆ ಹಾಜರಾಗುವವರೆಗೂ ಕೂಡ ಆಸ್ತಿ ಕೃಷ್ಣಯ್ಯನವರಿಗೇ ಸೇರಿದ್ದೆಂದು ಭಾವಿಸಿದ್ದೇನೆ ಎಂದರೆ ಸರಿ. ನಾನು ಬೆಂಗಳೂರಿನ ಕಬ್ಬನ್ ಪೇಟೆಯಲ್ಲಿ ವಾಸವಾಗಿದ್ದೇನೆ ಎಂದರೆ ಮೊದಲು ಅಲ್ಲಿ ವಾಸವಾಗಿದ್ದೆ ಈಗ ಮತ್ತೀಕೆರೆಗೆ ಬಂದಿದ್ದೇನೆ ಎಂದು ಸಾಕ್ಷಿಯು ನುಡಿಯುತ್ತಾರೆ. ಈ ದಾವೆ ಸಲ್ಲಿಸುವ ಮುಂಚೆ ನನಗೆ ವಕೀಲರ ನೋಟೀಸು ಬಂದಿತ್ತು ಎನ್ನುವುದು ಸರಿ. ಸದರಿ ನೋಟೀಸಿನ ಜೊತೆ ನಿಪಿ-12 ರ ಚೆಕ್ ನ ಪ್ರತಿ ಬಂದಿತ್ತು ಎಂದರೆ ನನಗೆ ಯಾವುದೇ ಪ್ರತಿ ಬಂದಿಲ್ಲ. ನಾನು ಸ್ವೀಕರಿಸಿದ ನೋಟೀಸ್ ನಲ್ಲಿ ಪ್ಯಾರಾ 11 ರಲ್ಲಿ ಚೆಕ್ ಕಳುಹಿಸಿರುವ ಬಗ್ಗೆ ನಮೂದು ಇತ್ತು ಎನ್ನುವುದು ಸರಿ. ಈ ರೀತಿಯಾಗಿ ನೋಟೀಸ್ ಬಂದ ನಂತರ ಪ್ಯಾರಾ 11 ಕ್ಕೆ ಸಂಬಂಧಿಸಿದಂತೆ ಉತ್ತರ ನೀಡಲು ವಕೀಲರನ್ನು ಭೇಟಿಯಾಗಿ ಚರ್ಚಿಸಿದ್ದೀರಾ ಎಂದರೆ ವಕೀಲರಿಗೆ ಹೇಳಿದ್ದೇನೆ. ನನ್ನ ಮತ್ತು ವಾದಿಯ ನಡುವೆ 24 ಲಕ್ಷ ರೂ.ಗಳಿಗೆ ಕ್ರಯ ನಿಷ್ಕರ್ಷೆಯಾಗಿ 4 ಲಕ್ಷ ರೂ. ಮುಂಗಡ ಪಡೆದು 20 ಲಕ್ಷ ರೂ. ಬಾಕಿ ಇತ್ತು ಎಂದರೆ ಸರಿಯಲ್ಲ. ಸದರಿ 20 ಲಕ್ಷವನ್ನು ಕೊಡುವ ಸಲುವಾಗಿಯೇ ನಿಪಿ-11 ರ ನೋಟೀಸ್ ನೀಡಿ ನಿಪಿ-11(ಎ) ರಂತೆ ಮಾಹಿತಿ ನೀಡಿದ್ದರು ಎಂದರೆ ಸರಿ ಆದರೆ ಹಣ ಬಂದಿಲ್ಲ. ನಿಪಿ-12 ರ ಚೆಕ್ ನ್ನು ಇದೇ ಮೊದಲ ಬಾರಿಗೆ ನಾನು ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ. ನನ್ನ ಮತ್ತು ವಾದಿಯ ನಡುವೆ 20 ಲಕ್ಷ ಬಾಕಿಗೆ ಸಂಬಂಧಿಸಿದಂತೆ ಮಾತ್ರ ವ್ಯವಹಾರವಿದೆ ಎಂದರೆ ಸರಿ. ನನಗೆ ಹಣ ಬಂದಿಲ್ಲ.

ದಾವಾ ಸ್ವತ್ತು ಕೈಗಾರಿಕಾ ಏಕ ಪರಿವರ್ತನೆ ಆಗಿದೆ ಎಂದರೆ ಸರಿ. ವಾದಿಯ ತಮ್ಮನ ಹೆಸರು ತುಕಾರಾಮ್ ಎನ್ನುವುದು ಗೊತ್ತಿದೆ. ದಾವಾ ಸ್ವತ್ತನ್ನು ತುಕಾರಾಮ್ ರವರು 1994 ರಲ್ಲಿ ನಿಪಿ-5 ರಂತೆ ಖರೀದಿಸಿದ್ದಾರೆ ಎಂದರೆ ಸರಿ. ಸದರಿ ಸ್ವತ್ತನ್ನು ತುಕಾರಾಮ್ ಲಕ್ಷ್ಮೀನಾರಾಯಣನವರಿಂದ ಕೊಂಡು ಕೊಂಡಿದ್ದಾರೆ ಎಂದರೆ ಸರಿ. ತುಕಾರಾಮ್ ರವರು ಶಕ್ತಿ ಗಾರ್ಮೆಂಟ್ಸ್ ನ ಪರವಾಗಿ ಸದರಿ ಆಸ್ತಿಯನ್ನು ಕೊಂಡು ಕೊಂಡಿದ್ದರು ಎಂದರೆ ಸರಿ.

ದಾವಾ ಸ್ವತ್ತಿನಲ್ಲಿ ಶಕ್ತಿ ಗಾರ್ಮೆಂಟ್ಸ್ ನವರು ಒಂದು ಹಾಸಿಗೆಗೆ ಸಂಬಂಧಪಟ್ಟ ಘಟಕ ನಡೆಸುತ್ತಿದ್ದರು ಎನ್ನುವುದು ಸರಿ. ಸದರಿ ಗಾರ್ಮೆಂಟ್ಸ್ ನಲ್ಲಿ ವಾದಿಯೂ ಕೂಡ ಪಾಲುದಾರರಾಗಿದ್ದರು ಎಂದರೆ ಸರಿಯಲ್ಲ. ಸದರಿ ಗಾರ್ಮೆಂಟ್ಸ್ ನಲ್ಲಿ ತುಕಾರಾಮ್, ಸೋಮಶೇಖರ ಮತ್ತು ಲೋಕೇಶ ಪಾಲುದಾರರಾಗಿದ್ದರು ಎಂದು ನುಡಿಯುತ್ತಾರೆ. ಸದರಿ ಆಸ್ತಿ ಅಣ್ಣಾಪುರ ರಸ್ತೆಗೆ ಹೊಂದಿಕೊಂಡಂತೆ ಇದ್ದಂತಹ ಆಸ್ತಿ ಎಂದರೆ ಸರಿ. ಸದರಿ ಆಸ್ತಿಯ ಪಶ್ಚಿಮಕ್ಕೆ ವಾದಿಯ ಕುಟುಂಬಕ್ಕೆ ಸೇರಿ ಶಕ್ತಿ ಕಂಫರ್ಟ್ಸ್ ಪ್ರೈವೇಟ್ ಲಿಮಿಟಿಡ್ ಎಂಬ ಕಂಪನಿ ಇದೆ ಎಂದರೆ ಸರಿ. ಸದರಿ ಕಂಪನಿಯಲ್ಲಿ ಬೆಡ್ಸಿ ಕಂಫರ್ಟ್ಸ್ ಎಂಬ ಹಾಸಿಗೆ ತಯಾರಿಕೆ ನಡೆಸುತ್ತಾರೆ ಎಂದರೆ ಸರಿ. ಅದನ್ನು ನಡೆಸಲು ದಾವಾ ಸ್ವತ್ತಿನಲ್ಲಿ ಸ್ಥಾಪಿಸಿರುವ ಘಟಕದಿಂದ ಖಚ್ಚಾ ಮಾಲು ಹೋಗುತ್ತದೆ ಎಂದರೆ ಸರಿ. ಸ್ವತ್ತಿನ ದಕ್ಷಿಣಕ್ಕೂ ಕೂಡ ಶಕ್ತಿ ಕಂಫರ್ಟ್ಸ್ ನ ಯೂನಿಟ್ ಇದೆ ಎನ್ನುವುದು ಸರಿ. ಈಗ ನಾನು ನೋಡುತ್ತಿರುವ ನಕ್ಷೆಯಲ್ಲಿರುವ ರಸ್ತೆಗೆ ಅಂಟಿಕೊಂಡಂತೆ ಇರುವ ಜಾಗವೇ ದಾವಾ ಸ್ವತ್ತು ಎನ್ನುವುದು ಸರಿ. ಸಾಕ್ಷಿಯು ನಕ್ಷೆಯನ್ನು ಒಪ್ಪಿ ಕೊಂಡಿರುವುದರಿಂದ ನಕ್ಷೆಯನ್ನು ನಿಪಿ-14 ಎಂದು ಅವರು ಗುರುತಿಸಿರುವ ಜಾಗವನ್ನು ನಿಪಿ-14(ಎ) ಎಂದು ಗುರುತಿಸಲಾಯಿತು. ಸದರಿ ಜಾಗದ ದಕ್ಷಿಣಕ್ಕೆ ಮತ್ತು ಪಶ್ಚಿಮಕ್ಕೆ ಶಕ್ತಿ ಕಂಫರ್ಟ್ಸ್ ನ ಘಟಕಗಳು ಇವೆ ಎಂದರೆ ಸರಿ. ಶಕ್ತಿ ಗಾರ್ಮೆಂಟ್ಸ್ ಮತ್ತು ಶಕ್ತಿ ಕಂಫರ್ಟ್ಸ್ 1990-91 ರಲ್ಲಿ ಪ್ರಾರಂಭವಾಗಿದೆ ಎಂದರೆ ಸರಿ. ವಾದಿಯು ಶಕ್ತಿ ಕಂಫರ್ಟ್ಸ್ ಪ್ರೈವೇಟ್ ಲಿಮಿಟೆಡ್ ನ ವ್ಯವಸ್ಥಾಪಕ ನಿರ್ದೇಶಕರು ಎಂದರೆ ಸರಿ. ನನ್ನ ಚಿಕ್ಕಪ್ಪ ದೊಡ್ಡಪ್ಪ ಮತ್ತು ಅವರ ಮಕ್ಕಳೆಲ್ಲರೂ ಕೈಗಾರಿಕೋದ್ಯಮಿಗಳು ಎಂದರೆ ಸರಿ. ನಾನು ಶಕ್ತಿ ಗಾರ್ಮೆಂಟ್ಸ್ ಗಾಗಲೀ ಶಕ್ತಿ ಕಂಫರ್ಟ್ಸ್ ಪ್ರೈವೇಟ್ ಲಿಮಿಟೆಡ್ ಗಾಗಲೀ ಸಂಬಂಧಿಸಿದವನಲ್ಲ ಎಂದರೆ ಸರಿ. ಇಂದಿಗೂ ಕೂಡ ಶಕ್ತಿ ಕಂಫರ್ಟ್ಸ್ ಪ್ರೈವೇಟ್ ಲಿಮಿಟೆಡ್‌ನಲ್ಲಿ ಹಾಸಿಗೆಗಳು ತಯಾರಾಗುತ್ತವೆ ಎಂದರೆ ಸರಿ. ಅದರ ಟ್ರೇಡ್ ಮಾರ್ಕ್ಸ್ ಬೆಡ್ಸಿ ಎನ್ನುವುದು ಸರಿ.

ಶಕ್ತಿ ಗಾರ್ಮೆಂಟ್ಸ್ ಕ್ರಮೇಣ ನಷ್ಟದಲ್ಲಿ ನಡೆಯಲು ಶುರುವಾಯಿತು ಎಂದರೆ ಸರಿ. ಶಕ್ತಿ ಗಾರ್ಮಂಟ್ಸ್ ನ ಪಾಲುದಾರರೆಲ್ಲರೂ ಸೇರಿ ದಾವಾ ಸ್ವತ್ತು ಮತ್ತು ಅಲ್ಲಿದ್ದಂತಹ ಪ್ಲಾಂಟ್ ಮತ್ತು ಮಷಿನರಿಗಳನ್ನು ಕೆ ಎಸ್ ಎಫ್ ಸಿ ಗೆ ಅಡಮಾನ ಮಾಡಿ ಸಾಲ ಪಡೆದಿದ್ದರು

ಎಂದರೆ ಸರಿ. ಕೆ ಎಸ್ ಎಫ್ ಸಿ ರವರು ಸದರಿ ಆಸ್ತಿಯನ್ನು ಸಾಲ ಮರು ಪಾವತಿ ಆಗದ ಕಾರಣ ಮುಟ್ಟುಗೋಲು ಹಾಕಿಕೊಳ್ಳಬಹುದು ಎನ್ನುವ ಸ್ಥಿತಿ ಬಂದಾಗ ದಾವಾ ಸ್ವತ್ತನ್ನು ನನ್ನ ಹೆಸರಿಗೆ ಕ್ರಯಪತ್ರ ಬರೆಸಲಾಯಿತು ಎಂದರೆ ಸರಿ. ಈಗ ನಾನು ನೋಡುತ್ತಿರುವ ನಿಪಿ-6 ಅದೇ ಕ್ರಯಪತ್ರ ಎಂದರೆ ಸರಿ.

**ಮುಂದುವರೆದ ಪಾಟೀ ಸವಾಲು ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಿ ಓದಿ ಹೇಳಿ, ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.)

ಹಿರಿಯ ಸಿವಿಲ್ ನ್ಯಾಯಾಧೀಶರು
ತಿಪಟೂರು.